Establishment of Harijan Housing and Development Corporation

664. SRI JAYAPRAKASH SHETTY (Brahmavar). –

Will the Minister for Rural Development and Social Welfare be pleased to state :—

(*a*) whether there is any proposal for establishing a Harijan Housing and Development Corporation in the State ;

(*b*) if so, when ?

SRI N. RACHAIAH (Minister for Rural Development and Socia Welfare).—

(*a*) No.

(*b*) Does not arise in view of reply to Clause (*a*).

ಶ್ರೀ ಜಯಪ್ರಕಾಶ ಶೆಟ್ಟಿ.– ಸ್ವಾಮಿ, ಇಂಥ ಒಂದು ಗೃಹನಿರ್ಮಾಣ ಸಂಸ್ಥೆಯು ತಮಿಳುನಾಡಿನಲ್ಲಿ ಇದೆ. ಈ ಸಂಸ್ಥೆಯಿಂದ ಹರಿಜನರು ತುಂಬಾ ಪ್ರಯೋಜನ ಪಡೆದಿದ್ದಾರೆ ಇಂಥ ಸಂಸ್ಥೆಯನ್ನು ನಮ್ಮ ರಾಜ್ಯದಲ್ಲಿ ಏತಕ್ಕೆ ತೆರೆಯಬಾರದು ನಮ್ಮ ರಾಜ್ಯದಲ್ಲಿ ಮಾಡುವ ಸಂಭವ ಇಲ್ಲವೇ ಕಾರಣ ತಿಳಿಸುತ್ತೀರಾ ?

† ಶ್ರೀ ಎನ್. ರಾಚಯ್ಯ —ತಮಿಳುನಾಡಿನಲ್ಲಿ ಈ ಯೋಜನೆ ಇಟ್ಟುಕೊಂಡಿದೆಯೆಂಬುದು ದೊಡ್ಡ ದೊಡ್ಡದಾಗಿ ಪೇಪರ್‌ನಲ್ಲಿ ಬಂದಿದೆ. ಅದನ್ನು ಕಟಿಂಗ್ಸ್ ತೆಗೆದು ಸಂಬಂಧಪಟ್ಟ ಹೌಸಿಂಗ್ ಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಮುಂದೆ ಇದನ್ನು ಪರಿಶೀಲನೆ ಮಾಡುತ್ತೇವೆ, ನಾನು ಹಿಂದೆ ೧೯೫೮—೬೨ ರಲ್ಲಿ ಸಚಿವನಾಗಿದ್ದಾಗ ಹೌಸಿಂಗ್ ಕಾರ್ಪೊರೇಷನ್ ರಚನೆ ಮಾಡಬೇಕೆಂದು ನಾವು ಯೋಚನೆ ಮಾಡಿದ್ದೆವು, ನಾನು ಬಿಟ್ಟಮೇಲೆ ಕಾರ್ಪೊರೇಷನ್ ಆಯಿತು. ಈ ಕಾರ್ಪೊರೇಷನ್‌ನಿಂದ ಹರಿಜನರುಗಳಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಸಾಲ ಕೊಡತಕ್ಕದ್ದು ಒಂದು ಸಾವಿರ ರೂಪಾಯಿನಿಂದ ಮೂರುಸಾವಿರ ರೂಪಾಯಿಗಳವರೆಗೆ, ಸುಮಾರು ನಾಲ್ಕುವರೆ ಕೋಟಿ ರೂಪಾಯಿಗಳ ತನಕ ಕಾರ್ಪೊರೇಷನ್ ಮೂಲಕ ಹರಿಜನರು ಸಾಲ ಪಡೆದು ನನಗೆ ತಿಳಿದ ಮಟ್ಟಿಗೆ ಅನೇಕ ಕಡೆಗಳಲ್ಲಿ ಒಳ್ಳೆಯ ಮನೆಗಳನ್ನು ಕಟ್ಟಿದ್ದಾರೆ. ಆದರೆ ಸಾಲ ಬಹುಭಾಗ ವಸೂಲಿ ಆಗದೇ ಇದ್ದ ಕಾರಣ ೮೬ ಸೊಸೈಟಿಗಳಲ್ಲಿ ೭೦ ಸೊಸೈಟಿಗಳು ಡಿಫಂಕ್ಟ್ ಆದುದರಿಂದ, ಆ ಕಾರ್ಪೊರೇಷನ್ ತನ್ನ ಆಕ್ಟಿವಿಟೀಸ್‌ನ್ನು ವಲಂದುವರಿಸುವುದಕ್ಕೆ ಆಗಿಲ್ಲ. ೧೬ ಸೊಸೈಟಿಗಳು ಮಾತ್ರ ಜೀವಂತವಾಗಿದ್ದವು ಎಂದು ನಾನು ತಿಳಿದುಕೊಂಡಿರತಕ್ಕದ್ದು, ಏನಾದರೂ ಬಹುಭಾಗದ ಹಣ ವಸೂಲಿ ಯಾದರೆ ಈ ಒಂದು ಯೋಜನೆಯನ್ನು ಕಾರ್ಪೊರೇಷನ್ ಮೂಲಕ ಮತ್ತೆ ಮುಂದುವರಿಸುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಜಯಪ್ರಕಾಶ್ ಶೆಟ್ಟಿ.—ಈಗ ಹರಿಜನ ಗಿರಿಜನರಿಗೆ ವಸತಿ ಸೌಕರ್ಯ ಕೊಡುವುದಕ್ಕೆ ಸರ್ಕಾರ ಯಾವ ಯಾವ ಯೋಜನೆ ಹಾಕಿಕೊಂಡಿದೆ,

ಶ್ರೀ ಎನ್ ರಾಚಯ್ಯ.—ಈಗ ನಾವು ಮಾಡಿರತಕ್ಕಂಥಾದ್ದು, ತಾಲ್ಲೂಕು ಬೋರ್ಡ ತಾಲ್ಲೂಕ್ ಅಭಿವೃದ್ಧಿ ಮಂಡಲಿಗಳಲ್ಲಿ, ಪಂಚಾಯಿತಿ ಮತ್ತು ಟೌನ್ ಪಂಚಾಯಿತಿಗಳಲ್ಲಿ ೧೮ ಭಾಗ ಹಣವನ್ನು ಅವರಿಗೋಸ್ಕರ, ಅವರ ಅಭಿವೃದ್ಧಿ ಕಾರ್ಯಗಳಿಗೆ ಇಡುವುದು, ಒಂದು ಸಾವಿರ ರೂಪಾಯಿ ತನಕ, ಬಡ ನಿರ್ಗತಿಕರಾಗಿದ್ದು, ಸ್ವಂತ ನಿವೇಶನ ಇದ್ದರೆ, ಒಂದು ಸಾವಿರ ರೂಪಾಯಿ ಬೆಲೆ ಬಾಳತಕ್ಕ ಮನೆ ಕಟ್ಟುವ ಸಾಮಾನುಗಳನ್ನು ಒದಗಿಸುವುದು ಕಿಟಕಿ ಬಾಗಿಲುಗಳನ್ನು ಫಾರೆಸ್ಟ್ ಇಲಾಖೆಯಿಂದ ಒದಗಿಸುವ ಯೋಜನೆ ಇದೆ ಜನತಾ ಗೃಹನಿರ್ಮಾಣ ಯೋಜನೆ ಏನು ಇದೆಯೋ ಅದರಲ್ಲಿ ಸರಕಾರದ ಉದ್ದೇಶ ಕನಿಷ್ಟ ಅರ್ಧ ಭಾಗ ಮನೆಗಳಾದರೂ ಕೂಡ ಹರಿಜನರಿಗೆ ಕೊಡಬೇಕು ಎಂದು ಇದೆ. ಈಗ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಸಿಳಿ ಸಾವಿರ ಮನೆಗಳನ್ನು ಕಟ್ಟಿಸುವುದರಲ್ಲಿ ಅವನು ಕೂಡ ಅರ್ಧ ಹಾಕಬೇಕು ಎಂದು ಆದೇಶ ಇಟ್ಟಿದ್ದೇವೆ, ಆ ಕಾರ್ಯಕ್ರಮದಂತೆ ಅನೇಕ ಕಡೆಗಳಲ್ಲಿ ಮಾಡುತ್ತಾ ಇದ್ದೇವೆ.

ಶ್ರೀ ಸಿ. ಬೈರೇಗೌಡ.—ಜನತಾ ಹೌಸಿಂಗ್ ಸ್ಕೀಮಿನಲ್ಲಿ ಎರಡೂವರೆ ಸಾವಿರ ರೂಪಾಯಿ ಕೊಡುವುದಕ್ಕೆ ಹೊರಟಿದ್ದೀರಿ, ಆ ಹಣದಲ್ಲಿ ಮನೆಗಳು ಆಗುವುದಿಲ್ಲ, ಕಟ್ಟಿರತಕ್ಕ ಮನೆಗಳು ಈಗಾಗಲೇ ಬಿದ್ದು ಹೋಗಿವೆ, ಆದುದರಿಂದ ಈ ಹಣವನ್ನು ಎರಡೂವರೆ ಸಾವಿರದಿಂದ ಮೂರುವರೆ ಸಾವಿರ ರೂಪಾಯಿ ಮಾಡುವುದಕ್ಕೆ ಸರ್ಕಾರದ ಉದ್ದೇಶ ಇದೆಯೇ ?

ಶ್ರೀ ಎನ್. ರಾಚಯ್ಯ.—ಕಳೆದ ಎರಡು ವರ್ಷಗಳಿಂದ ಹೊಸದಾಗಿ ಕಟ್ಟಿರತಕ್ಕ ಮನೆಗಳು ಬಿದ್ದು ಹೋಗಿರುವುದನ್ನು ಗಮನಕ್ಕೆ ಬಂದಿಲ್ಲ. ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಏನೋ ಗೊತ್ತಿಲ್ಲ ಅನೇಕ ಕಡೆಗಳಲ್ಲಿ ನಾನು ಪ್ರವಾಸ ಮಾಡಿದಾಗ, ನೋಡಿದ್ದೇನೆ. ಬಿಜಾಪುರದ ಕಡೆ ಒಳ್ಳೆಯ ಮನೆಗಳನ್ನು ಕಟ್ಟಿದ್ದಾರೆ. ಬಿದ್ದುಹೋಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದರೆ ರಿಪೇರಿ ಮಾಡುವುದಕ್ಕೆ ಯೋಚನೆ ಮಾಡೋಣ. ಇದಕ್ಕೆ ಸಂಬಂಧಪಟ್ಟ ಸಚಿವರು ಮಾನ್ಯ ಫೋರ್ಪಡೆಯವರು ಉತ್ತರ ಹೇಳುವಾಗ ನೀವು ಹೇಳಿದಂತ ಪ್ರಶ್ನೆಗೆ ಪರಿಶೀಲನೆ ಮಾಡೋಣ ಎಂದು ಹೇಳಿದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ.

Short Notic Questions and Answers

Penal Interest charged on Takkavi and Land Development Lands

35. Sri K. H. Hanume Gowda (Hassan).—

Will the Minister for Revenue be pleased to state :—

(*a*) the rate of interest charged by the Government on Takkavi and Land Development Loans taken by the Ryots from the Revenue Department ;

(*b*) the rate of penal interest charged on the instalment due which is not paid in time ;

(*c*) the rate of percentage of ordinary and penal interest on the overdue loan instalment :

(*d*) whether it has come to the notice of the Government that the penal interest is being collected from the ryots who are unable to pay the loan instalment in time due to failure of sufficient rainfall in time and failure of crops in that year ;

(*e*) if so, the nature of relief proposed to be provided by the Government to such ryots ?

Sri N. Hutchamasthy Gowda (Minister for Revenue).—

(*a*) 8½ per cent.

(*b*) 10 per cent.

(*c*) 18½ per cent.

(*d*) No.

(*e*) During the period of failure of rain or failure of crops for any other reasons penal intetest need not be paid on the loan instalments which are kept in abeyance. But, ordinary interest has to be paid. Except during this period except in cases of loan instalments is kept in abeyance, penal interest will be charged on the overdue loan instalment amounts.

ಶ್ರೀ ಕೆ. ಎಚ್ ಹನುಮೇಗೌಡ.—ಸ್ವಾಮಿ, ಈಗ ಆರ್ಡಿನರಿ ಇಂಟರೆಸ್ಟ್ ಎಂಟೂವರೆ ಪರ್‌ಸೆಂಟ್, ಪೀನಲ್ ಇಂಟರೆಸ್ಟ್ ಹತ್ತು ಪರ್‌ಸೆಂಟ್ ಅಂದರೆ ಒಟ್ಟು ಹದಿನೆಂಟೂವರೆ ಪರ್‌ಸೆಂಟ್ ಹಾಕುತ್ತೀರಿ, ಇದನ್ನು ನೋಡಿದರೆ ಈ ಆರ್ಡಿನರಿ ಇಂಟರೆಸ್ಟ್‌ಗಿಂತ ಈ ಪೀನಲ್ ಇಂಟರೆಸ್ಟ್ ಜಾಸ್ತಿಯಾಗುವುದರಿಂದ ರೈತರಿಗೆ ಈ ಭಾರವನ್ನು ಹೊರುವುದಕ್ಕೆ ಆಗುವುದಿಲ್ಲ. ತಾವು ಯಾವ ದೃಷ್ಟಿಯಿಂದ ಅತಿ ಹೆಚ್ಚಿನ ಪೀನಲ್ ಇಂಟರೆಸ್ಟ್ ಹಾಕಿದ್ದೀರಿ ಅದನ್ನು ತಿಳಿಸಬೇಕು ?